

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ರೋಂನಲ್ಲಿದ್ದಾಗ ರೋಮನ್ನರಂತೆ ವರ್ತಿಸಬೇಕೆ?

'ವಿಶ್ವಶಾಂತಿ ಯಾತ್ರೆ'ಯನ್ನು ಎರಡು ಬಾರಿ ಏರ್ಪಡಿಸಿ (1994 ಮತ್ತು 2000) ನೂರಾರು ಹಳ್ಳಿಗರನ್ನು ಯುರೋಪ್, ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೆ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದ ನಮ್ಮ ಪ್ರವಾಸದ ಸಾಹಸಗಾಥೆಯ ಕೆಲವಾರು ಸ್ವಾರಸ್ಯಕರ ಘಟನೆಗಳನ್ನು ಈ ಅಂಕಣದಲ್ಲಿ ಹಿಂದೆ ಓದಿದ್ದೀರಿ. ಸ್ವಿಟ್ಸರ್‌ಲೆಂಡ್‌ನ ಪ್ರವಾಸ ಕಥನದಲ್ಲಿ ವರ್ಣಿಸಿದಂತೆ ಆಲ್ಪ್ಸ್ ಪರ್ವತಶ್ರೇಣಿಯ ಮೌಂಟ್ ಟಿಟ್ಲಿಸ್ (Mount Titlis) ಮತ್ತು ಯುಂಗ್ ಫ್ರಾವ್ (Jung Frau) ಶಿಖರಗಳನ್ನು ನೋಡಿಯಾದ ಮೇಲೆ ನಮ್ಮ ಮುಂದಿನ ಪ್ರಯಾಣ ಎರಡು ದೊಡ್ಡ ವಾತಾನುಕೂಲ ಲಕ್ಸುರಿ ಬಸ್ಸುಗಳಲ್ಲಿ ಇಟಲಿಗೆ ಸಾಗಿತ್ತು. ಕನ್ನಡಕ್ಕೂ ಮತ್ತು ಕೆನಡಾ ದೇಶಕ್ಕೂ ಏನಾದರೂ ಸಂಬಂಧ ಇದೆಯೇ ಎಂದು ಕನ್ನಡಭಾಷಾವಿಜ್ಞಾನಿಗಳು ತಲೆಕೆಡಿಸಿಕೊಂಡಂತೆ ಇಟಲಿಗೂ ಮತ್ತು ಇಡ್ಲಿಗೂ ಏನಾದರೂ ಸಂಬಂಧವಿದೆಯೇ ಎಂದು ಕಂಡುಹಿಡಿಯಲು ಯಾವ 'ಪಾಕಶಾಸ್ತ್ರವಿಜ್ಞಾನಿ'ಗಳೂ ಪ್ರಯತ್ನಿಸಿದಂತೆ ಕಾಣುವುದಿಲ್ಲ. ಭೋಜನಪ್ರಿಯರಿಗೆ ಇಟಲಿಯ 'ಪಿತ್ಸಾ' (piza) ತುಂಬಾ ರುಚಿಕರವಾದ ಖಾದ್ಯ.

ಇಟಲಿಯ ಭೂಪಟವನ್ನು ನೀವು ಯಾವಾಗಲಾದರೂ ಸೂಕ್ಷ್ಮವಾಗಿ ಗಮನಿಸಿದ್ದೀರಾ? ಇಲ್ಲದಿದ್ದರೆ ಈಗ ಮತ್ತೊಮ್ಮೆ ನೋಡಿ. ಯೂರೋಪಿನ ಜನರು ಇಟಲಿಯನ್ನು ಯುರೋಪ್ ಭೂಪಟದಲ್ಲಿ 'ಎತ್ತರದ ಹಿಮ್ಮಡಿಯ ಷೂ' (high-heeled shoe) ಧರಿಸಿದ ಒಬ್ಬ ಮಹಿಳೆಯ ಮೊಣಕಾಲಿನಂತೆ ಕಾಣಿಸುತ್ತದೆ ಎಂದು ಬಣ್ಣಿಸುತ್ತಾರೆ. ಜಗತ್ತಿನ ಅತ್ಯದ್ಭುತಗಳಲ್ಲಿ ಒಂದಾದ ವಾಲುಗೋಪುರವುಳ್ಳ ಪ್ರಸಿದ್ಧ ನಗರ ಇಟಲಿಯ ಪೀಸಾ. ಒಂದೇ ಲೋಹದಿಂದಾದ ಎರಡು ವಿಭಿನ್ನ ತೂಕದ ಗುಂಡುಗಳನ್ನು ನಿರ್ದಿಷ್ಟ ಎತ್ತರದಿಂದ ಏಕಕಾಲದಲ್ಲಿ ಭೂಮಿಗೆ ಇಳಿಯಬಿಟ್ಟರೆ, ಎರಡೂ ಗುಂಡುಗಳು ಒಂದೇ ಸಮಯದಲ್ಲಿ ಭೂಮಿಯನ್ನು ತಲುಪುತ್ತವೆ ಎಂದು 16ನೆಯ ಶತಮಾನದ ಪ್ರಖ್ಯಾತ ಭೌತವಿಜ್ಞಾನಿ ಗೆಲಿಲಿಯೋ ಕಂಡುಹಿಡಿದು ತೋರಿಸಿದ್ದು ಈ ವಾಲುಗೋಪುರದಿಂದಲೇ.

1977-79 ರ ಅವಧಿಯಲ್ಲಿ ವಿಯೆನ್ನಾದಲ್ಲಿ ಓದುತ್ತಿದ್ದಾಗ ಇಲ್ಲಿಗೆ ಮೊಟ್ಟಮೊದಲು ಬಂದಿದ್ದು ಆರು ಅಂತಸ್ತುಗಳುಳ್ಳ ಈ ವಾಲುಗೋಪುರದ ತುದಿಯವರೆಗೂ ಹತ್ತಿ ಇಳಿದ ನೆನಪು ನಮ್ಮ ಮನಸ್ಸಿನಲ್ಲಿ ಇನ್ನೂ ಹಚ್ಚಹಸಿರಾಗಿದೆ. ಗೋಪುರದ ಮೇಲೊಂದು ಬೃಹದಾಕಾರದ ಗಂಟೆ. ಚರ್ಚಿನಲ್ಲಿ ಪ್ರಾರ್ಥನೆ ಇದ್ದಾಗ ಇಡೀ ನಗರದಲ್ಲೇ ಮಂಗಳಕರ ಶಬ್ದತರಂಗಗಳನ್ನು ಮೊಳಗಿಸುವ ಅದರ ಸುಮಧುರ ಘಂಟಾ ನಿನಾದ! ಅದೆಲ್ಲಾ ಗತಕಾಲದ ಇತಿಹಾಸ. ಇತ್ತೀಚೆಗೆ ಯಾವ ಯಾತ್ರಿಕರನ್ನೂ ವಾಲುಗೋಪುರದ ಮೇಲೆ ಹತ್ತಲು ಬಿಡುತ್ತಿರಲಿಲ್ಲ! ಗಂಟೆಯೇನೋ ಇತ್ತು ಆದರೆ ಶಬ್ದವಿರಲಿಲ್ಲ! ಪಾಪ! ಶತಮಾನಗಳಿಂದಲೂ ಲಕ್ಷಾಂತರ ಜನರ ಕಾಲಿನಿಂದ ತುಳಿಸಿಕೊಂಡು, ಬೂಟುಗಾಲುಗಳಲ್ಲಿ ಒದೆಸಿಕೊಂಡು, ನಿತ್ರಾಣಗೊಂಡ ಗೋಪುರ ವಾಲಿದಂತಿತ್ತು! ಅದರ ಹೊಟ್ಟೆಗೆ ಲೋಹದ ಹಗ್ಗವನ್ನು ಬಿಗಿದು, ಬುಡಕ್ಕೆ ಭಾರದ ಗುಂಡುಗಳನ್ನಿಟ್ಟು ಬೀಳದಂತೆ ತಡೆಗಟ್ಟಲು ವಿಜ್ಞಾನಿಗಳ ಶತಪ್ರಯತ್ನ ನಡೆದಿತ್ತು! ಇದರಿಂದ ವಾಲುಗೋಪುರವು ನೋಡಲು ಅಮಂಗಲಕರವಾಗಿ ಕಾಣಿಸುತ್ತಿದ್ದು ಅದು ಮಾಡದ ಪಾಪಕ್ಕೆ ಕಾಲಿಗೆ ಕಾಲ್ಬಳೆ ಹಾಕಿ ಕೈಗೆ ಬೇಡಿ ತೊಡಿಸಿ ಬೀದಿಯಲ್ಲಿ ಪೋಲೀಸರು ಎಳೆದುಕೊಂಡು ಹೋಗುತ್ತಿರುವ ನಿರಪರಾಧಿಯಂತೆ ನೋಡಿದವರಿಗೆ 'ಅಯ್ಯೋ' ಎನಿಸುತ್ತಿತ್ತು! ಆದರೆ 1990 ರಿಂದ ಸುಮಾರು 10 ವರ್ಷಗಳ ಕಾಲ ಪರಿಣತ ವಿಜ್ಞಾನಿಗಳು ತಮ್ಮ ಅಪಾರ ಪರಿಶ್ರಮದಿಂದ ವಾಲುಗೋಪುರವನ್ನು ಕೆಲವು ಇಂಚಿನಷ್ಟು ಹಿಂದಕ್ಕೆ ಸರಿಸಿ ಹೆಚ್ಚು ವಾಲದಂತೆ ಸುರಕ್ಷಿತವಾಗಿರಿಸಿದ್ದು ಪ್ರವಾಸಿಗರಿಗೆ ಮೇಲೆ ಹೋಗಲು ಮತ್ತೆ ಅವಕಾಶ ಲಭಿಸಿದೆ. ಇನ್ನೂ ಎರಡು/ಮೂರು ಶತಮಾನಗಳ ಕಾಲ ಯಾವ ಅಪಾಯವೂ ಇಲ್ಲವೆಂದು ನಂಬಲಾಗಿದೆ.

ಸಂಜೆ ಪೀಸಾ ತಲುಪಿ ವಸತಿಗೆ ಏರ್ಪಾಡಾಗಿದ್ದ ಹೋಟೆಲ್‌ನಲ್ಲಿ ಕಾಲಿಡುತ್ತಿದ್ದಂತೆಯೇ ನಮಗೆ ಗಾಬರಿ ಹುಟ್ಟಿಸಿದ್ದು ಅಲ್ಲಿಯ ಬಾತ್‌ರೂಂ ವ್ಯವಸ್ಥೆ. ಸಾಮಾನ್ಯವಾಗಿ ಇಟಲಿ ದೇಶದ ಬಾತ್ ರೂಂಗಳಲ್ಲಿ ವಾಷ್ ಬೇಸಿನ್

ಜೊತೆಗೆ ಎರಡು ಕಮೋಡ್‌ಗಳು ಇರುತ್ತವೆ. ಅವುಗಳಲ್ಲಿ ಒಂದು ಮಲಬಾಧೆಗೆ ಮತ್ತೊಂದು ಕಾಲು ತೊಳೆದುಕೊಳ್ಳುವುದಕ್ಕೆ. ಆದರೆ ಅವೆರಡೂ ನೋಡಲು ಒಂದೇ ರೀತಿ ಕಾಣಿಸುತ್ತವೆ. ಅಕ್ಕಪಕ್ಕದಲ್ಲಿಯೇ ಇರುತ್ತವೆ. ಕಾಲು ತೊಳೆಯಲು ಇರುವ ಕಮೋಡ್‌ಗೆ 'ಬಿಡೆ' (Bidet) ಎಂದು ಕರೆಯುತ್ತಾರೆ. ವಿಯೆನ್ನಾದಲ್ಲಿ ಓದುತ್ತಿದ್ದಾಗ ಇಟಲಿಯ ಸ್ನೇಹಿತರ ಮನೆಗೆ ಹೋದ ಸಂದರ್ಭಗಳಲ್ಲಿ ಇದೆಲ್ಲವನ್ನೂ ಗಮನಿಸಿದ್ದ ನಮಗೆ ನಮ್ಮ ಹಳ್ಳಿಯ ಜನರೇ ಏಕೆ ಪೇಟೆಯ ವಿದ್ಯಾವಂತ ಪ್ರವಾಸಿಗರೂ ಸಹ ಎಲ್ಲಿ ಮೋಸಹೋಗಿ ಬಾತ್‌ರೂಂಗಳಲ್ಲಿ ಅವಾಂತರವೆಬ್ಬಿಸಿಬಿಡುತ್ತಾರೋ ಎಂಬ ಭಯ ನಮ್ಮನ್ನು ಆವರಿಸಿತು. ಹೇಳಲು ಸಂಕೋಚಪಟ್ಟುಕೊಂಡರೆ ಆಗುವ ಪ್ರಮಾದಕ್ಕೆ ಎಣೆಯಿಲ್ಲ. ಕೂಡಲೇ ನಮ್ಮ ಪ್ರವಾಸಿಗರ ಹತ್ತು ತಂಡಗಳ ಮುಖ್ಯಸ್ಥರ ರೂಮಿಗೂ ನಾವೇ ಸ್ವತಃ ಫೋನು ಮಾಡಿ ಅದರ ಸೂಕ್ಷ್ಮತೆಯನ್ನು ವಿವರಿಸಿ ಎಲ್ಲರಿಗೂ ತಿಳಿಹೇಳುವಂತೆ ತಾಕೀತು ಮಾಡಿದೆವು. ಮರುದಿನ ಯಾವ ಪ್ರವಾಸಿಗರೂ ದಂಡ ತೆರುವ ಪ್ರಸಂಗ ಬರದೇ ಇದ್ದುದರಿಂದ ಎಲ್ಲವೂ ಸಾಂಗವಾಗಿ ನೆರವೇರಿರಬೇಕೆಂದು ಸಮಾಧಾನಪಟ್ಟುಕೊಂಡೆವು.

ಆದರೂ ನಮ್ಮ ಜನರ ಹಳೆಯ ಚಾಳಿ ಹೋಗುವುದಿಲ್ಲ. ಮರು ದಿನ ರೋಂ ನಗರಕ್ಕೆ ಬಸ್ಸಿನಲ್ಲಿ ಪ್ರಯಾಣಿಸುವಾಗ ಮಾರ್ಗಮಧ್ಯೆ ರೆಸ್ಟೋರೆಂಟ್‌ಗಳು ಇರುವ ಜಾಗದಲ್ಲಿ ಕಾಫಿ-ಟೀ ಕುಡಿಯಲು ನಿಲ್ಲಿಸಲಾಗುತ್ತಿತ್ತು. ಎಲ್ಲೆಂದರಲ್ಲಿ ಹೊರಗೆ ಕುಳಿತು ಮೂತ್ರವಿಸರ್ಜನೆ ಮಾಡುವುದು ಕಂಡುಬಂದರೆ ಈ ದೇಶಗಳಲ್ಲಿ ದಂಡ ವಿಧಿಸುತ್ತಾರೆಂದು ತಾಕೀತು ಮಾಡಿದ್ದೆವು. ನಮ್ಮ ಬಸ್ಸು ಪೀಸಾದಿಂದ ಹೊರಟು ರೋಮ್ ನಗರದ ಹೊರವಲಯ ತಲುಪುತ್ತಿದ್ದಂತೆಯೇ ಯಥಾಪ್ರಕಾರ ಬಸ್ಸನ್ನು ನಿಲ್ಲಿಸಲಾಯಿತು. ಕೆಲವು ಕಡೆ ಟಾಯ್ಲೆಟ್‌ಗಳನ್ನು ಉಚಿತವಾಗಿ ಬಳಸಿಕೊಳ್ಳುವ ವ್ಯವಸ್ಥೆ ಇತ್ತು, ಮತ್ತೆ ಕೆಲವು ಕಡೆ ನಿಗದಿತ ಹಣವನ್ನು ತೆತ್ತು ಬಳಸಿಕೊಳ್ಳಬೇಕಾಗಿತ್ತು. ನಾವು ಬಸ್ಸಿನಲ್ಲೇ ಕುಳಿತುಕೊಂಡು ಎಲ್ಲರನ್ನೂ ಗಮನಿಸುತ್ತಿದ್ದೆವು. ದುಡ್ಡು ತೆರಬೇಕಾಗುತ್ತದೆಯೆಂಬ ಕಿಚ್ಚಿಗೆ ಒಂದಿಬ್ಬರು ಹಳ್ಳಿಯ ರೈತರು ರೆಸ್ಟೋರೆಂಟ್ ಕಡೆಗೆ ಹೋಗದೆ ಲುಂಗಿ ಪಂಜೆಯನ್ನು ಏರಿಸಿಕೊಂಡು ಮರಗಿಡಗಳ ಕಡೆಗೆ ಕಳ್ಳನಡಿಗೆಯಲ್ಲಿ ಹೋಗುತ್ತಿರುವುದನ್ನು ಕಂಡು ಗಾಬರಿಯಾಯಿತು. ಹಿಂದಿನಿಂದ ಪ್ರವಾಸಿಗರೊಬ್ಬರನ್ನು ಬೆನ್ನಟ್ಟಿಸಿ ಅವರನ್ನು ಕರೆಸಿ ಗದರಿಸಬೇಕಾಯಿತು. ಈ ಘಟನೆಯು ಬಹಳ ವರ್ಷಗಳ ಹಿಂದೆ ನಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಹಾಸ್ಯಕಥೆಯೊಂದನ್ನು ನೆನಪಿಗೆ ತಂದಿತು:

ರಷ್ಯಾದ ಅಧ್ಯಕ್ಷರಾಗಿದ್ದ ಖ್ರುಶ್ಚೋವ್ ಒಮ್ಮೆ ಭಾರತಕ್ಕೆ ಬಂದಿದ್ದರು. ಅವರನ್ನು ಭಾರತದ ಅಂದಿನ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಕಾಶಿಗೆ ಕರೆದುಕೊಂಡು ಹೋಗಿದ್ದರು. ಇಬ್ಬರೂ ಬೆಳಿಗ್ಗೆ ವಾಯುವಿಹಾರಾರ್ಥ ಗಂಗಾನದಿಯ ಮೇಲೆ ದೋಣಿಯಲ್ಲಿ ಹೋಗುತ್ತಿದ್ದರು. ನದಿಯ ಆಚೆ ದಡದಲ್ಲಿ ರಾಮನಗರದ ಕಡೆ ಕಾಶೀ ನರೇಶರ ಕೋಟೆಯ ಬಳಿ ಒಬ್ಬ ತಂಬಿಗೆಯನ್ನು ಮುಂದಿಟ್ಟುಕೊಂಡು ಬಹಿರ್ದೆಶೆಗೆ ಕುಳಿತಿದ್ದ. ಅವನನ್ನು ಖ್ರುಶ್ಚೋವ್ ನೋಡಿ ನೆಹರೂರ ಗಮನ ಸೆಳೆದು ಆ ವ್ಯಕ್ತಿ ಏನು ಮಾಡುತ್ತಿದ್ದಾನೆಂದು ಸಹಜವಾಗಿ ಕೇಳಿದರು. ನೆಹರೂ ಉತ್ತರ ಕೊಡಲಾಗದೆ ನಾಚಿಕೆಯಿಂದ ತಬ್ಬಿಬ್ಬಾದರು. ಮುಂದೊಂದು ಸಲ ಖ್ರುಶ್ಚೋವ್‌ರವರ ಆಹ್ವಾನದ ಮೇರೆಗೆ ನೆಹರೂ ರಷ್ಯಾಕ್ಕೆ ಹೋಗಿದ್ದರು. ಇಬ್ಬರೂ ವಿಹಾರಾರ್ಥವಾಗಿ ಅಲ್ಲಿಯ ಓಲ್ಗಾ ನದಿಯ ಮೇಲೆ ದೋಣಿಯಲ್ಲಿ ಕುಳಿತು ಮಾತನಾಡುತ್ತಾ ಮುಂದೆ ಸಾಗಿದ್ದರು. ನೆಹರೂರವರ ಮನಸ್ಸೆಲ್ಲಾ ಖ್ರುಶ್ಚೋವ್ ಕೂಡ ತಲೆ ತಗ್ಗಿಸುವಂತೆ ಮಾಡಬೇಕೆಂದು ಹೊಂಚುಹಾಕುತ್ತಿತ್ತು. ಕೊನೆಗೂ ಗಂಗಾನದಿಯ ದಂಡೆಯಲ್ಲಿ ಕಂಡಂತಹ ದೃಶ್ಯವೇ ಓಲ್ಗಾ ನದಿಯ ದಂಡೆಯ ಮೇಲೂ ಕಾಣಿಸಿತು. ಹಸನ್ಮುಖಿಯಾದ ನೆಹರೂ ಮುಯ್ಯಿಗೆ ಮುಯ್ಯೆಂಬಂತೆ ಅದೇ ಪ್ರಶ್ನೆಯನ್ನು ಖ್ರುಶ್ಚೋವ್‌ಗೆ ಹಾಕಿದರು. ಖ್ರುಶ್ಚೋವ್ ತಡಮಾಡಲಿಲ್ಲ. ಕುಪಿತರಾಗಿ ಕೂಡಲೇ ಆ ಅನಾಗರಿಕ ವ್ಯಕ್ತಿಯನ್ನು ಬಂಧಿಸುವಂತೆ ತಮ್ಮ ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದರು. ಮಾರನೆಯ ದಿನವೇ ಪತ್ರಿಕೆಯ ಮುಖಪುಟಗಳಲ್ಲಿ ರೋಚಕ ಸುದ್ದಿಯೊಂದು ಪ್ರಕಟವಾಗಿತ್ತು: 'ಓಲ್ಗಾ ನದಿಯ ದಂಡೆಯಲ್ಲಿ ಪೋಲೀಸರಿಂದ ಭಾರತದ ರಾಯಭಾರಿಯ ಬಂಧನ!' ***(Indian High Commissioner arrested on the bank of river Olga!)***

ಪ್ರಸಿದ್ಧವಾದ ರೋಂ ನಗರದ ವ್ಯಾಟಿಕನ್ ಸಿಟಿಗೆ ನಮ್ಮ ಭೇಟಿ. ಜಗತ್ತಿನಾದ್ಯಂತ ಇರುವ ಕ್ಯಾಥೊಲಿಕ್ ಕ್ರೈಸ್ತರ ಧರ್ಮಗುರು ಪೋಪ್ ಇರುವುದು ಇಲ್ಲಿಯೇ. ಆಗ ಇದ್ದ ಪೋಪ್‌ರವರ ಹೆಸರು 2ನೆಯ ಜಾನ್ ಪಾಲ್. ಮೂಲತಃ ಜೆಕೊಸ್ಲವಾಕಿಯಾ ದೇಶದವರು. ಅವರ ಹಿಂದಿನ ಪೋಪ್ 1ನೆಯ ಜಾನ್ ಪಾಲ್ ಅಲ್ಪಾಯುಷಿ. ಬಹಳ ಕಾಲ ಬದುಕಲಿಲ್ಲ. ನಾವು ವಿಯೆನ್ನಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿದ್ದಾಗ ಇವರೀರ್ವರ ಪಟ್ಟಾಭಿಷೇಕವನ್ನೂ ಅತ್ಯಂತ ಸಮೀಪದಿಂದ ನೋಡುವ ಸದವಕಾಶ ನಮಗೆ ಲಭಿಸಿತ್ತು. "ಕ್ರೈಸ್ತ ಮತೀಯರಿಂದ ನಾವು ಶಿಸ್ತನ್ನು ಕಲಿಯಬೇಕು. ಚರ್ಚುಗಳಿಗೆ ಹೋಗುವ ದಿನ ಮತ್ತು ಕಾಲ, ಅಲ್ಲಿ ಅನುಸರಿಸಬೇಕಾದ ಪ್ರಾರ್ಥನಾ ವಿಧಾನ - ಇಂಥ ಎಲ್ಲ ವಿಷಯಗಳಲ್ಲೂ ಅವರಲ್ಲಿ ಒಂದು ಕಟ್ಟುಪಾಡು, ಒಂದು ನಿಯಮಬದ್ಧತೆ ಇರುತ್ತದೆ"

ಎಂದು ನಮ್ಮ ಲಿಂಗೈಕ್ಯ ಗುರುಗಳು ತಮ್ಮ 'ಆತ್ಮನಿವೇದನೆ'ಯಲ್ಲಿ ಬರೆದಿರುವ ಮಾತು ಅಕ್ಷರಶಃ ನಿಜ. ಒಮ್ಮೆ ವಿಯೆನ್ನಾದಿಂದ ಸಂಶೋಧನಾ ವಿದ್ಯಾರ್ಥಿಯಾಗಿ ಕ್ರಿಸ್‌ಮಸ್ ರಜೆಯಲ್ಲಿ ವ್ಯಾಟಿಕನ್‌ಗೆ ಹೋಗಿದ್ದಾಗ ಆಗಿನ ಪೋಪ್‌ರವರು ಸೇಂಟ್ ಪೀಟರ್ ಕ್ಯಥೀಡ್ರಲ್ ಮುಂದೆ ನಿಂತು ನಡೆಸಿದ ಪ್ರಾರ್ಥನಾಸಭೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಸೇಂಟ್ ಪೀಟರ್ ವೃತ್ತದ ಬಳಿ ಲಕ್ಷಾಂತರ ಕ್ರೈಸ್ತ ಧರ್ಮೀಯರು ಸೇರಿ ಸ್ವಲ್ಪವೂ ಅಪಸ್ವರವಿಲ್ಲದೆ ಎಲ್ಲರೂ ಒಟ್ಟಿಗೆ ವಾದ್ಯಸಂಗೀತದೊಂದಿಗೆ ಸುಶ್ರಾವ್ಯವಾಗಿ ಹಾಡಿದ ಸಾಮೂಹಿಕ ಪ್ರಾರ್ಥನೆ ಇನ್ನೂ ನಮ್ಮ ಕಿವಿಗಳಲ್ಲಿ ರಿಂಗಣಿಸುತ್ತಿದೆ. ಅದೊಂದು ಮೈನವಿರೇಳಿಸುವ ವಿಶಿಷ್ಟ ಅನುಭವ!

ಸೇಂಟ್ ಪೀಟರ್ ಕ್ಯಥೀಡ್ರಲ್ ಒಳಗೆ ಮುಖ್ಯ ವೇದಿಕೆಯತ್ತ (Altar) ಸಾಗಿದರೆ ಏಸುಕ್ರಿಸ್ತನ ಪ್ರಮುಖ ಶಿಷ್ಯರಲ್ಲೊಬ್ಬನಾದ ಸೇಂಟ್ ಪೀಟರ್‌ನ ಅಮೃತಶಿಲೆಯ ವಿಗ್ರಹವಿದೆ. ಅಲ್ಲಿಗೆ ಬರುವ ಶ್ರದ್ಧಾಳು ಕ್ರೈಸ್ತರೆಲ್ಲಾ ಆ ವಿಗ್ರಹದ ಬಲಪಾದವನ್ನು ಮುಟ್ಟಿ ನಮಸ್ಕರಿಸುತ್ತಾರೆ. ಶತಮಾನಗಳಿಂದ ನಡೆದು ಬಂದಿರುವ ಈ ಪದ್ಧತಿಯಿಂದ ಆ ಪಾದ ತುಂಬಾ ಸವೆದುಹೋಗಿದೆ. ಹೀಗೆಯೇ ನೀವು ಮಾಡಿದರೆ ವಿಗ್ರಹದ ಆ ಪಾದವು ಒಂದು ಕಾಲಕ್ಕೆ ಸಂಪೂರ್ಣ ಸವೆದು ಹೋಗುತ್ತದಲ್ಲಾ ಆಗೇನು ಮಾಡುವಿರಿ ಎಂದು ನಾವು ಕೇಳಿದ ಪ್ರಶ್ನೆಗೆ ತಟ್ಟನೆ ಯಾರಿಂದಲೋ ಬಂದ ಉತ್ತರ: 'ಇನ್ನೊಂದು ಪಾದವಿದೆಯಲ್ಲಾ!' ಇತ್ತೀಚಿನ ದಿನಮಾನಗಳಲ್ಲಿ ಕ್ರೈಸ್ತ ಯುವಕ-ಯುವತಿಯರು ಚರ್ಚುಗಳಿಂದ ವಿಮುಖರಾಗುತ್ತಿದ್ದಾರೆ. ಪರಂಪರಾಗತವಾಗಿ ಬಂದ ಚರ್ಚಿನ ಕೆಲವು ಧಾರ್ಮಿಕ ಕಟ್ಟಳೆಗಳನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ನಮ್ಮಲ್ಲಿ ಮಠಾಧೀಶರು ದೊಡ್ಡ ದೊಡ್ಡ ಕಾರುಗಳಲ್ಲಿ ಪ್ರಯಾಣಿಸುವುದನ್ನು ಟೀಕಿಸಿದಂತೆ ಅಲ್ಲಿಯೂ ಪಾದ್ರಿಗಳ ಐಷಾರಾಮ ಜೀವನವನ್ನು ಕಟುವಾಗಿ ಟೀಕಿಸುತ್ತಾರೆ. ಇಂದು ಐರೋಪ್ಯ ರಾಷ್ಟ್ರಗಳ ಚರ್ಚುಗಳಲ್ಲಿ ನಡೆಯುವ ಪ್ರಾರ್ಥನಾ ಸಭೆಗಳನ್ನು ನೋಡಿದರೆ ಹದಿಹರೆಯದ ವ್ಯಕ್ತಿಗಳಿಗಿಂತ ವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಪಾದ್ರಿಗಳಾಗಲು ಬರುವ ಯುವಕರ ಸಂಖ್ಯೆ ಕಡಿಮೆಯಾಗುತ್ತಿದೆ. ತ್ಯಾಗಜೀವನಕ್ಕಿಂತ ಭೋಗಜೀವನದ ಕಡೆ ಯುವಕರು ವಾಲುತ್ತಿದ್ದಾರೆ. ಹೀಗಾಗಿ ಎಷ್ಟೋ ಚರ್ಚುಗಳಲ್ಲಿ ಪ್ರಾರ್ಥನೆಯನ್ನು ನಡೆಸಲು ಭಾರತೀಯ ಪಾದ್ರಿಗಳಿಗೆ ಬೇಡಿಕೆ ಹೆಚ್ಚುತ್ತಿದೆ.

ರೋಂ ನಗರದಲ್ಲಿ ಎರಡು ರಾತ್ರಿ ತಂಗಿದ್ದೆವು. ನಮ್ಮ ಪ್ರವಾಸಿಗರಿಗೆ ಪೋಪ್ ಸಂದರ್ಶನ ಮಾಡಿಸಬೇಕೆಂಬ ಉದ್ದೇಶದಿಂದ ಇ-ಮೇಲ್‌ನಲ್ಲಿ ವ್ಯಾಟಿಕನ್ ಸಂಪರ್ಕಿಸಲು ಪ್ರಯತ್ನಿಸಿದೆವಾದರೂ ನಮ್ಮ ಪ್ರಯಾಣದ ವಿವರಗಳು ಟ್ರಾವಲ್ ಏಜಂಟ್‌ನಿಂದ ಸಕಾಲದಲ್ಲಿ ದೊರೆಯದ ಕಾರಣ ಸಾಧ್ಯವಾಗಲಿಲ್ಲ. ಯಾವುದೋ ಒಂದು ಹಬ್ಬದ ಕಾರಣ ರೋಂ ನಗರದಲ್ಲಿ ಜನರ ನೂಕು-ನುಗ್ಗಲು ಬಹಳ ಇದ್ದುದರಿಂದಲೂ, ದೂರದಲ್ಲಿಯೇ ಎಲ್ಲ ವಾಹನಗಳನ್ನು ತಡೆಗಟ್ಟುತ್ತಿದ್ದುದರಿಂದಲೂ ನಾವು ಹೋಗದಿರಲು ನಿರ್ಧರಿಸಿ ಹೋಟೆಲ್‌ನಲ್ಲಿಯೇ ಉಳಿದು ವಿಶ್ರಾಂತಿ ಪಡೆದೆವು. ಪ್ರವಾಸಿಗರು ಮಾತ್ರ ಕಷ್ಟಪಟ್ಟು ಜನನಿಬಿಡದ ಮಧ್ಯೆಯೂ ಹೋಗಿ ಎಲ್ಲವನ್ನೂ ನೋಡಿಕೊಂಡು ಸಂತೋಷದಿಂದ ಸಂಜೆ ಹಿಂದಿರುಗಿದರು. ಹೋಟೆಲ್ ಒಳ ಪ್ರಾಂಗಣದಲ್ಲಿ ಪ್ರವಾಸಿಗರೆಲ್ಲರೂ ನಮ್ಮ ಸಮ್ಮುಖದಲ್ಲಿ ಅನೌಪಚಾರಿಕ ಸಭೆ ಸೇರಿ ತಂತಮ್ಮ ಅನುಭವಗಳನ್ನು ಹಂಚಿಕೊಳ್ಳತೊಡಗಿದರು. ಪ್ರವಾಸದಲ್ಲಿ ಮಾಜಿ ಸಹಕಾರ ಸಚಿವರಾದ ಎಸ್.ಎಸ್. ಪಾಟೀಲರೂ ಸಹ ಇದ್ದರು. ಹಿಂದಿನ ರಾತ್ರಿ ಹೋಟೆಲ್ಲಿನಲ್ಲಿ ಅವರಿಗೆ ಸ್ವಲ್ಪ ಶೆಖೆ ಎನಿಸಿತ್ತು. ರೂಮಿನಲ್ಲಿರುವ ಏರ್ ಕಂಡೀಶನ್ ಯಂತ್ರದ ರೆಗ್ಯುಲೇಟರನ್ನು ತಿರುಗಿಸಿದರು. ಪಕ್ಕದ ನಾಲ್ಕಾರು ರೂಮುಗಳಲ್ಲಿದ್ದ ಸಹಯಾತ್ರಿಕರಿಗೆ ಆ ಯಂತ್ರವನ್ನು ಬಳಸುವ ವಿಧಾನ ಗೊತ್ತಿರಲಿಲ್ಲ. ಪಾಟೀಲರು ಮಾಜಿ ಮಂತ್ರಿಗಳೆಂಬ ಬಿಗುಮಾನವಿಲ್ಲದೆ ಅವರ ರೂಮುಗಳಿಗೂ ಹೋಗಿ ಸಹಾಯ ಮಾಡಿ ಬಂದರು. ಮಾರನೆಯ ದಿನ ಬೆಳಗ್ಗೆ ಎಲ್ಲರೂ ಏಳುವಾಗ ಮೈಬೆವರಿಳಿಯುತ್ತಿತ್ತು. ಏರ್ ಕಂಡೀಷನ್ ಹಾಕಿಕೊಂಡು ಮಲಗಿದ್ದರೂ ಎಷ್ಟೊಂದು ಶೆಖೆ ಈ ಇಟಲಿ ದೇಶದಲ್ಲಿ ಎಂದು ಎಲ್ಲರೂ ಗೊಣಗುತ್ತಿದ್ದರು. ಆದರೆ ವಾಸ್ತವವಾಗಿ ನಡೆದ ಸಂಗತಿಯೆಂದರೆ ಪಾಟೀಲರು ಏರ್ ಕಂಡೀಷನ್ನಿನ ರೆಗ್ಯುಲೇಟರನ್ನು ತಣ್ಣನೆಯ ಗಾಳಿಯ ಕಡೆಗೆ ಸರಿಸುವ ಬದಲು ಬಿಸಿಗಾಳಿಯ ಕಡೆಗೆ ಸರಿಸಿದ್ದರು! ಪಾಟೀಲರ ಮಾತಿನಲ್ಲಿಯೇ ಹೇಳುವುದಾದರೆ 'ಬುದ್ಧಿ, ನಾನು ಬಹಳ ಶಾಣ್ಯಾ ಎಂದು ತಿಳಿದುಕೊಂಡಿದ್ದೆ; ಎಲ್ಲರಿಗೂ ಸಹಾಯ ಮಾಡಿದೆ ಎಂದು ಬೀಗಿದ್ದೆ; ಆದರೆ ಅದರ ಬಿಸಿ ನನಗೇ ತಟ್ಟಿತು' ಎಂದಾಗ ಎಲ್ಲರೂ ಬಿದ್ದು ಬಿದ್ದು ನಕ್ಕರು.

ಅಂದು ಜೂನ್ 16 ನಮ್ಮ ಜನ್ಮದಿನವೆಂದು ತಿಳಿದಿದ್ದ ದಾವಣಗೆರೆಯ ಸಕ್ಕರೆರೋಗ ವೈದ್ಯರಾದ ಡಾ. ಮಂಜುನಾಥ್ ಆಲೂರ್ ರವರು ಪ್ರವಾಸಿಗರಿಗೆ ಒಂದು 'surprise' ಸಂಗತಿಯನ್ನು ತಿಳಿಸುವುದಾಗಿ ಹೇಳಿ ಅವರು ವಾಪಾಸು ಬರುವಾಗ ಗುಟ್ಟಾಗಿ ತೆಗೆದುಕೊಂಡು ಬಂದಿದ್ದ 'ಬರ್ತ್‌ಡೇ ಕೇಕ್' ನಮ್ಮ ಮುಂದಿಟ್ಟು ಅದನ್ನು ಕತ್ತರಿಸಲು ವಿನಂತಿಸಿಕೊಂಡರು. ಎಲ್ಲರೂ ಖುಷಿಯಿಂದ ಚಪ್ಪಾಳೆ ತಟ್ಟತೊಡಗಿದರು. ಮಠದ ಸ್ವಾಮಿಗಳಾದವರ ನಿಜವಾದ ಜನ್ಮದಿನ ಪೂರ್ವಾಶ್ರಮದಲ್ಲಿ ಹುಟ್ಟಿದ ದಿನವಲ್ಲ, ಗುರುವಿನಿಂದ ಉಪದೇಶ ಪಡೆದ ದಿನ ಎಂದು ಕಳೆದ ವಾರದ ನಮ್ಮ ಅಂಕಣದಲ್ಲಿ ಬರೆಯಲಾಗಿದೆ. ನಮಗೆ ಇಬ್ಬಂದಿ ಸ್ಥಿತಿಯುಂಟಾಯಿತು. ಕೇಕ್ ಕತ್ತರಿಸುವುದು ನಮ್ಮ

ಸಂಸ್ಕೃತಿಯಲ್ಲ. ಕತ್ತರಿಸದಿದ್ದರೆ ಶಿಷ್ಯರ ಮನಸ್ಸಿಗೆ ನೋವಾಗುತ್ತದೆ. ಆದರೆ ರೋಗಿ ಬಯಸಿದ್ದನ್ನು ಕೊಡುವವನು ವೈದ್ಯನಲ್ಲ; ರೋಗಕ್ಕೆ ಬೇಕಾದ್ದನ್ನು ಕೊಡುವವನು ವೈದ್ಯ ಎನಿಸಿತು. ಕೇಕ್ ಕತ್ತರಿಸದೆ ಹಾಗೆಯೇ ಹಸ್ತದಿಂದ ಮುಟ್ಟಿ ಆಶೀರ್ವದಿಸಿ ಹಂಚಲು ಕೊಟ್ಟೆವು. "When in Rome, do as the Romans do" ಎಂಬ ಇಂಗ್ಲೀಷ್ ಗಾದೆಮಾತು ನೆನಪಿಗೆ ಬಂದರೂ "Even when in Rome, we are Indians and not Romans" ಎಂದೆನಿಸಿತು. ನಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಪಾಶ್ಚಾತ್ಯರಿಗೆ ಅಪಾರ ಗೌರವವಿದೆ. ಪರದೇಶಗಳಿಗೆ ಹೋದಾಗ ಕೈಕುಲುಕುವ ನಮ್ಮ ರಾಜಕಾರಣಿಗಳು, ಪರದೇಶದವರು ನಮ್ಮ ದೇಶಕ್ಕೆ ಬಂದಾಗ ಕೈಮುಗಿಯಬಾರದೇಕೆ? ನಾಚಿಕೆಪಟ್ಟುಕೊಳ್ಳಬೇಕೇಕೆ?

23.6.2010

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑